ಮಾಡುತ್ತೀರಾ?

ಅಧ್ಯಕ್ಷರು ಸೋಮವಾರದಿಂದ ಆದಮೇಲೆ ಮಂಗಳವಾರದಿಂದ ಮಾಡಿ ಎಂದು ಹೇಳುತ್ತೀರಿ ಮಂಗಳವಾರ ಆದ ಮೇಲೆ ಬುಧವಾರದಿಂದ ಮಾಡಿ ಎಂದು ಹೇಳುತ್ತೀರಿ ಅಯಿತು ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ರವರೆ ತಾವು ಪ್ರಶ್ನೆಯನ್ನು ಕೇಳಿ

(ಈ ಹಂತದಲ್ಲಿ ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ಶ್ರೀ ಹೆಚ್ ಹಾಲಪ್ಪ, ಶ್ರೀ ಎನ್ ಎಲ್ ನರೇಂದ್ರಬಾಬು ರವರು ಸದನದ ಬಾವಿಯಿಂದ ತಮ್ಮ ತಮ್ಮ ಸ್ಥಾನಗಳಿಗೆ ಹೋದರು)

ಅರೆಕಾಲಿಕ ದೈಹಿಕ ಶಿಕ್ಷಕರ ವೇತನ ನಿಗದ್ಧಿ

72 (405) ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ)

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

1 ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಅರೆಕಾಲಿಕಾ ದೈಹಿಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರೆಷ್ಟು ? ಎಷ್ಟು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿದ್ದಾರೆ, ಸದರಿಯವರಿಗೆ ಪ್ರತಿ ತಿಂಗಳು ನೀಡುವ ಸಂಬಳವೆಷ್ಟು?

2 ಈ ಶಿಕ್ಷಕರಿಗೆ ಕನಿಷ್ಠ ಕಾಯ್ದೆಯಡಿ ವೇತನ ನಿಗಧಿಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ

3 ಅರೆಕಾಲಿಕ ಶಿಕ್ಷಕರ ಸೇವೆಯನ್ನು ಪೂರ್ಣಾವಧಿಯೆಂದು

ಪರಿಗಣಿಸಿ ಸಂಬಳ ನಿಗಧಿಗೊಳಿಸಲು ಸರ್ಕಾರ ಕೈಗೊಳ್ಳುತ್ತಿರುವ ಕ್ರಮವೇನು?

ಶ್ರೀ ಹೆಚ್ ಕೆ ಕುಮಾರ ಸ್ವಾಮಿ

1 ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಬಾಲ ಸೇವಾ ಸಂಸ್ಥೆಗಳಲ್ಲಿ ಅರೆಕಾಲಿಕ–ದೈಹಿಕ ಶಿಕ್ಷಕರಾಗಿ ಕೆಲಸ ನಿರ್ವಹಿಸುತ್ತಿರುವ ನೌಕರರ ಮಾಹಿತಿಯನ್ನು ಜಿಲ್ಲಾವಾರು ಈ ಕೆಳಕಂಡಂತೆ ಸಲ್ಲಿಸಲಾಗಿದೆ

ಜಿಲ್ಲೆ		ಸಂಖ್ಯೆ
1	ಮೈಸೂರು	4
2	ದಾವಣಗೆರೆ	2
3	ಬೆಳಗಾವಿ	–
4	ರಾಯಚೂರು	–
5	ಧಾರವಾಡ	4
6	ಗುಲ್ಬರ್ಗ	4
7	ಕೋಲಾರ	1
8	ಶಿವಮೊಗ್ಗ	1
9	ಬೆಂಗಳೂರು	7
ಒಟ್ಟು		23

1 ಇಲಾಖೆಯಲ್ಲಿ ಮೇಲಿನ 9 ಜಿಲ್ಲೆಗಳಲ್ಲಿ ಬೆಳಗಾವಿ ಮತ್ತು ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ 23 ಜನರು ಸುಮಾರು 6 ರಿಂದ 23 ವರ್ಷಗಳಿಂದ ದಿನಕ್ಕೆ 2 ಘಂಟೆಗಳ ಕಾಲ ಅರೆಕಾಲಿಕ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ ಹಾಗೂ ಇವರಿಗೆ ತಲಾ ಪ್ರತಿ ಮಾಹೆಗೆ ರೂ 350–00 ಗಳಂತೆ ಗೌರವ ಧನವನ್ನು ಪಾವತಿಸಲಾಗುತ್ತಿದೆ

2 ಈ ಕುರಿತು ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ಅರ್ಜಿ ಸಂಖ್ಯೆ 1389 ಮತ್ತು 1390 97 ರಲ್ಲಿ ನೀಡಿರುವ ನಿರ್ದೇಶನದಂತೆ ಇವರಿಗೆ ಕನಿಷ್ಠ ವೇತನ ಕಾಯ್ದೆಯಡಿ ವೇತನ ನಿಗಧಿಪಡಿಸುವ ಬಗ್ಗೆ ಆಧಿಕ ಇಲಾಖೆಯ ಸಹಮತಿ ಕೋರಲಾಗಿದೆ

3 ಪೂರ್ಣಾವದಿ ನೌಕರರೆಂದು ಪರಿಗಣಿಸುವ ಪ್ರಶ್ನೆ ಉದ್ಭವಿಸುವುದಿಲ್ಲ

ಅಧ್ಯಕ್ಷರು ಉಪಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವಿಲ್ಲ

ಡಾ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಅಧ್ಯಕ್ಷರೆ, ನಾನು ಉಪಪ್ರಶ್ನೆಯನ್ನು ಕೇಳುತ್ತಿಲ್ಲ ಇಲ್ಲಿ ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ ಕೇವಲ ಈ ರಾಜ್ಯದಲ್ಲಿ 24 ಜನರು ಇದ್ದಾರೆ ಅವರುಗಳು 24 ವರ್ಷಗಳಿಂದ ಕೇವಲ 350 ರೂಪಾಯಿಗಳಿಗೆ ಕೆಲಸವನ್ನು ಮಾಡುತ್ತಿದ್ದಾರೆ ಈ ಬಗ್ಗೆ ಕೆಎಟಿಯವರು ಜಡ್ಜ್‌ಮೆಂಟ್‌ನ್ನು ಕೊಟ್ಟಿದ್ದಾರೆ ಜಡ್ಜ್‌ಮೆಂಟ್ ಕೊಟ್ಟು ಸುಮಾರು ವರ್ಷಗಳಾದರೂ ಕೂಡ ಕನಿಷ್ಟ ವೇತನವನ್ನು ಕೊಟ್ಟರೆ ಅದು ಕಾನೂನು ಬಾಹಿರ ಆಗುತ್ತದೆ ಸರ್ಕಾರ minimum wages ಅನ್ನು ಕೊಡುವುದಕ್ಕಾಗುವುಲ್ಲೆ ದರೇನು? ಅರ್ಧಿಕ ಇಲಾಖೆಯಲ್ಲಿ ಪರಿಶೀಲನೆಯಲ್ಲಿದೆ ಎಂದು ಇದೆ ಸನ್ಮಾನ್ಯ ಸಚಿವರಲ್ಲಿ ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ ಈ ಬಗ್ಗೆ ತಾವು ಆಶ್ವಾಸನೆಯನ್ನು ಕೊಡಬೇಕು –minimum wages ನ್ನು ಕೊಡುತ್ತೇವೆಂದು ತಾವು

ಆಶ್ವಾಸನೆಯನ್ನು ಕೊಡಬೇಕು

ಶ್ರೀ ಹೆಚ್ ಕೆ ಕುಮಾರಸ್ವಾಮಿ ಮಾನ್ಯ ಅಧ್ಯಕ್ಷರೆ, ಈ ಶಿಕ್ಷಕರು ಮಾತ್ರ 2 ಗಂಟೆಗಳ ಕಾಲ ಸೇವೆಯನ್ನು ಸಲ್ಲಿಸುತ್ತಿದ್ದಾರೆ ಕನಷ್ಟ ವೇತನ ಕಾಯಿದೆ ಅಡಿ ಮತ್ತು ಅರೆಕಾಲಿಕ ಶಿಕ್ಷಕ ಎಂದರೆ ಕನಿಷ್ಟ 8 ಗಂಟೆಗಳ ಕಾಲ ಕೆಲಸವನ್ನು ಮಾಡಬೇಕು ಆದರೂ ಕೂಡ ಮಾನವೀಯತೆಯ ದೃಷ್ಟಿಯಿಂದ ಮತ್ತು ನ್ಯಾಯಾಧೀಕರಣವು ಕೂಡ ಆದೇಶ ಕೊಟ್ಟಿರುವುದರಿಂದ ನಾವು ಕಡತವನ್ನು ಆರ್ಥಿಕ ಇಲಾಖೆಗೆ ಕಳುಹಿಸಿದ್ದೇವೆ ಇದಕ್ಕೆ ತಾವು ಅವಕಾಶವನ್ನು ಕೊಡಬೇಕು ಹಾಗೂ ಕನಿಷ್ಟ ವೇತನವನ್ನು ನಿಗಧಿ ಮಾಡಬೇಕೆಂದು ಕೇಳಿದ್ದೇವೆ ನಾವು ಸಹಮತವನ್ನು ನಿರೀಕ್ಷೆ ಮಾಡುತ್ತಿದ್ದೇವೆ ಅಲ್ಲಿಂದ ಬಂದ ತಕ್ಷಣ ಮಾಡುತ್ತೇವೆ

ಅಧ್ಯಕ್ಷರೆ ಮಾನ್ಯ ಶ್ರೀರಾಮರೆಡ್ಡಿಯವರೆ, ತಾವು ಪ್ರಶ್ನೆಯನ್ನು ಕೇಳಿ,

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಅಧ್ಯಕ್ಷರೆ, ನಾನು 560 ಪ್ರಶ್ನೆಯನ್ನು ಮಾನ್ಯ ಕೃಷಿ ಮಾರುಕಟ್ಟೆ ಸಚಿವರಲ್ಲಿ ಕೇಳುತ್ತಿದ್ದೇನೆ ಏನು ಸದನದಲ್ಲಿ ಮಂತ್ರಿಗಳು ಇಲ್ಲವಲ್ಲಾ?

ಅಧ್ಯಕ್ಷರು ಮಂತ್ರಿಗಳು ಸದನದಲ್ಲಿ ಇದ್ದರಲ್ಲಾ ಎಲ್ಲೋ ಹೊರಟು ಹೋದರಲ್ಲಾ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಂತ್ರಿಗಳು ಸದನದಲ್ಲಿ ಇಲ್ಲವಲ್ಲಾ, ನಮ್ಮ ಪ್ರಶ್ನೆಗೆ ಯಾರು ಉತ್ತರವನ್ನು ಕೊಡುತ್ತಾರೆ

ಅಧ್ಯಕ್ಷರು. ಮಾನ್ಯ ಸಚಿವರು ಇಲ್ಲ ಅವರನ್ನು ಕರೆಸೋಣ ಈಗ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ ಇದ್ದಾರೆಯೇ? ತಮ್ಮ ಪ್ರಶ್ನೆ ಏನಾಗಿದೆ ಎಂದರೆ, ಪರಿಷ್ಟರಿಸಿದ ಪಡಿತರ ಚೀಟಿ ವಿತರಣೆಯಾಗಿದೆ, ಅದರ ಬಗ್ಗೆ ಅರ್ಧಗಂಟೆ ಕಾಲ ಚರ್ಚೆಗೆ ತೆಗೆದುಕೊಳ್ಳಬೇಕೆಂದು ತೀರ್ಮಾನವಾಗಿದೆ ಆದ್ದರಿಂದ ಆಗ ತೆಗೆದುಕೊಳ್ಳೋಣ

ಶ್ರೀ ಅಕ್ಕಿ ಮಲ್ಲಿಕಾರ್ಜುನ ಸಹದೇವಪ್ಪ ಮಾನ್ಯ ಅದ್ಯಕ್ಷರೆ, ನಾನು

ಪ್ರಶ್ನೆಯನ್ನು ಕೇಳುವುದಕ್ಕೆ ಅವಕಾಶವನ್ನು ಮಡಿಕೊಡಬೇಕು ನಾನು ಹಳ್ಳಿಯಲ್ಲಿರುವ ಬಗ್ಗೆ ಮಾತನಾಡಬೇಕಾಗಿದೆ

ಅಧ್ಯಕ್ಷರು ಅರ್ಧಗಂಟೆ ಕಾಲ ಚರ್ಚೆ ಮಾಡಬೇಕೆಂದು ಆಗಿದೆ ಅವತ್ತು ಈ ಬಗ್ಗೆ ಪ್ರಸ್ತಾಪ ಮಾಡೋಣ ಈಗ ಸಮಯವಿಲ್ಲ ಈಗ ಮಾನ್ಯ ಶ್ರೀರಾಮರೆಡ್ಡಿಯವರೆ ತಾವು ಪ್ರಶ್ನೆಯನ್ನು ಕೇಳಿ

ಕೃಷಿ ಮಾರುಕಟ್ಟೆ ಇಲಾಖಾ ವತಿಯಿಂದ ರಸ್ತೆ ಹಾಗೂ ವಸತಿ ಅಭಿವೃದ್ಧಿ

73 (560) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ)

ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪದ್ರಶ್ನೆಗಳಿಗೆ ಉತ್ತರಿಸುವರೇ

ಅ) ಪ್ರಸ್ತುತ ವರ್ಷ ಕೃಷಿ ಮಾರುಕಟ್ಟೆ ಇಲಾಖೆ ವತಿಯಿಂದ ರಸ್ತೆ ಅಭಿವೃದ್ಧಿ ಸಂತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ?

ಆ) ಹಾಗಿದ್ದಲ್ಲಿ, ಸರ್ಕಾರ ಈ ಬಗ್ಗೆ ಏನು ಕ್ರಮಕೈಗೊಂಡಿದೆ?

ಶ್ರೀ ಶರಣಬಸಪ್ಪ ದರ್ಶನಾಪುರ

ಅ) ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಪ್ರಸ್ತಾವನೆ ಇಲ್ಲ ಆದರೆ ಗ್ರಾಮೀಣ ಸಂತೆಗಳನ್ನು ಆರ್‌ಐಡಿಎಫ್ – XIII ರ ಯೋಜನೆಯಡಿಯಲ್ಲಿ ಅಭಿವೃದ್ಧಿ ಪಡಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ

ಆ) ಗ್ರಾಮೀಣ ಸಂತೆಗಳನ್ನು ನಬಾರ್ಡ್ ಸಹಾಯದಿಂದ ಆರ್‌ಐಡಿಎಫ್– XIII ರ ಯೋಜನೆಯಡಿಯಲ್ಲಿ ನಬಾರ್ಡ್ ಧನ